ಶ್ರೀ ಹೆಚ್. ವೈ. ಮೇಟಿ (ಅರಣ್ಯ ಇಲಾಖೆ) : ರೋಣ ತಾಲ್ಲೂಕಿನಲ್ಲಿ ಶಾಂತಿಗೆರೆ ಅರಣ್ಯ ಪ್ರದೇಶ 400 ಹೆಕ್ಟೇರುಗಳಷ್ಟು ವಿಸ್ತೀರ್ಣವಾಗಿರುತ್ತದೆ. ದಿನಾಂಕ : 12.9.1995 ರಂದು ಒಂದು ಗಂಡು ಕತ್ತೆ ಕಿರುಬ ಅರಣ್ಯ ಪ್ರದೇಶದ ಹತ್ತಿರ ಇರುವ ಕುಂಟೋಜಿ ಗ್ರಾಮದ ಮೂರು ಜನರನ್ನು ಹಾಗೂ ಕಾಲಕಾಳೇಶ್ವರಿ ಗ್ರಾಮದ ಇಬ್ಬರಿಗೂ ಗಾಯಗಳನ್ನು ಮಾಡಿದೆ. ಇದರಲ್ಲಿ 3 ಜನ ಗಂಡಸರು ಹಾಗೂ ಇಬ್ಬರು ಹೆಂಗಸರು ಇದ್ದು ಸುಮಾರು 45 ರಿಂದ 50 ವರ್ಷದವರಾಗಿರುತ್ತಾರೆ. ಗಾಯಗೊಂಡ 5 ಜನರನ್ನು ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಗೆ ದಾಖಲು ಮಾಡಿದ್ದು, ಈಗ ಅವರು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಲಯ ಅರಣ್ಯಾಧಿಕಾರಿ, ರೋಣರವರು ಗಾಯಗೊಂಡವರನ್ನು ಆಸ್ಪತ್ರೆಯಲ್ಲಿ ಖುದ್ದಾಗಿ ಭೇಟಿ ನೀಡಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡಿರುತ್ತಾರೆ. ಗಾಯಗೊಂಡವರಲ್ಲಿ ಒಂದು ಹೆಂಗಸಿಗೆ ಬೆರಳು ಹೋಗಿರುತ್ತದೆ ಮತ್ತು ಮುಖವನ್ನೆಲ್ಲಾ ಪರಚಿರುತ್ತದೆ.

ಒಂದು ಗಂಡು ಮತ್ತು ಹೆಣ್ಣು ಕತ್ತೆ ಕಿರುಬ ಜಗಳ ಆಡಿಕೊಂಡು ಗಂಡು ಕತ್ತೆಕಿರುಬ ಹೆಣ್ಣು ಕತ್ತೆಕಿರುಬವನ್ನು ಕೊಂದು ಹಾಕಿತು. ಗಂಡು ಕತ್ತೆಕಿರುಬವು ತದನಂತರ ಕುಂಟೋಜಿ ಮತ್ತು ಕಾಲಕಾಳೇಶ್ವರಿ ಹಳ್ಳಿಗಳಿಗೆ ನುಗ್ಗಿ ಮೇಲೆ ತಿಳಿಸಿದ ಐದು ಜನರಿಗೆ ಗಾಯಗಳನ್ನು ಉಂಟುಮಾಡಿದ್ದರ ಪರಿಣಾಮವಾಗಿ ಹಳ್ಳಿಯವರಲ್ಲಾ ಸೇರಿ ಗಂಡು ಕತ್ತೆಕಿರುಬವನ್ನು ಕೊಂದು ಹಾಕಿರುತ್ತಾರೆ. ಇದನ್ನು ಪೋಲೀಸ್ ಅಧಿಕಾರಿಗಳ ಮುಖಾಂತರ ಅರಣ್ಯ ಅಧಿಕಾರಿಗಳ ಸ್ವಾಧೀನ ಪಡಿಸಿಕೊಂಡು ಮರಣೋತ್ತರ ಪರೀಕ್ಷೆಗೆ ಗುರಿಪಡಿಸಿರುತ್ತಾರೆ.

ಸುತ್ತ ಮುತ್ತಲಿನ ಗ್ರಾಮಸ್ಥರು ಈ ಘಟನೆಯಿಂದ ಭಯಭೀತರಾಗಿದ್ದು ಅವರಲ್ಲಿ ಧೈರ್ಯವನ್ನು ಉಂಟು ಮಾಡಲು ಹಾಗೂ ಮಿಕ್ಕ ಕತ್ತೆಕಿರುಬಗಳು ಇದೇ ರೀತಿ ಜನರಿಗೆ ತೊಂದರೆ ಕೊಡದಂತೆ ನೋಡಿಕೊಳ್ಳಲು ವಲಯ ಅರಣ್ಯಾಧಿಕಾರಿ, ರೋಣ ಹಾಗೂ ಅವರ ಸಿಬ್ಬಂದಿಯವರು ಮತ್ತು ಧಾರವಾಡ ವನ್ಯಜೀವಿ ಉಪವಿಭಾಗದ ಸಿಬ್ಬಂದಿಯವರು ರಾತ್ರಿ ವೇಳೆಯಲ್ಲಿ ಗಸ್ತು ತಿರುಗುತ್ತಿದ್ದಾರೆ. ಅದಕ್ಕಾಗಿ ವಾಹನ ಮತ್ತು ಬಂದೂಕು ಇತ್ಯಾದಿಗಳನ್ನು ಸಮಯ ಬಂದರೆ ಉಪಯೋಗಿಸಲು ಸಿದ್ಧವಿರಿಸಿಕೊಂಡಿರುತ್ತಾರೆ. ಈಗಾಗಲೇ ಗಾಯಗೊಂಡವರಿಗೆ ಸರ್ಕಾರದ ಆದೇಶ ದಿನಾಂಕ: 21-08-1992ರ ಪರಿಮಿತಿಯಲ್ಲಿ ಪರಿಹಾರ ಕೊಡುವ ಬಗ್ಗೆ ಚಿಂತನೆ ನಡೆಸಿದೆ.

2) ಹೊಸದುರ್ಗ ತಾಲ್ಲೂಕಿನಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಯ ಅಭಾವ

ಶ್ರೀ ಟಿ.ಎಚ್. ಬಸವರಾಜ್ (ಹೊಸದುರ್ಗ) : ಹೊಸದುರ್ಗ ತಾಲ್ಲೂಕಿನಲ್ಲಿ ಈ ವರ್ಷ ಮುಂಗಾರು ಮತ್ತು ಹಿಂಗಾರು ಮಳೆಯು ಬಾರದೆ ತುಂಬಾ ಅಭಾವ ಪರಿಸ್ಥಿತಿ ಉಂಟಾಗಿದ್ದು ಈ ಭಾಗದ ಬಹುತೇಕ ಪ್ರದೇಶದಲ್ಲಿ ಬರಗಾಲದ ಸ್ಥಿತಿ ಉಂಟಾಗಿದ್ದು ಕುಡಿಯುವ ನೀರಿನ ಅಭಾವ, ಜಾನುವಾರುಗಳಿಗೆ ಮೇವಿನ ಅಭಾವ ಇದ್ದು ಸರ್ಕಾರದವರು ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಂಡು ವಿಶೇಷ ಅನುದಾನವನ್ನು ಬಿಡುಗಡೆ ಮಾಡಲು ಹಾಗೂ ರೈತರಿಗೆ, ಕೂಲಿಕಾರರಿಗೆ, ಕೆಲಸ ಕೊಟ್ಟು ಪರಿಹಾರ ಒದಗಿಸಬೇಕೆಂದು ಈ ಮೂಲಕ ಅಗ್ರಹಪೂರ್ವಕವಾಗಿ ಕೋರುತ್ತೇನೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಇದರ ಕಡೆ ಗಮನ ಹರಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಗಮನಕ್ಕೆ ತಂದು ಉತ್ತರ ಒದಗಿಸುತ್ತೇನೆ.

3) ಕಡೂರು ತಾಲ್ಲೂಕಿನಲ್ಲಿ ಮಳೆ ಬರದೇಇರುವುದರಿಂದ ಈ ತಾಲ್ಲೂಕನ್ನು ಬರಗಾಲವೆಂದು ಘೋಷಿಸುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :

1. ಕಡೂರು ತಾಲ್ಲೂಕಿನಲ್ಲಿ ಈಗಾಗಲೇ ಮಳೆ ಬರದೇ ಇರುವುದರಿಂದ ಕಡೂರು ತಾಲ್ಲೂಕಿನ ಜನರಿಗೆ ಮುಂಗಾರು ಮಳೆ ವಿಫಲವಾಗಿರುವುದಲ್ಲದೆ ಮತ್ತು ಹಿಂಗಾರು ಮಳೆ ಅಲ್ಪಸ್ವಲ್ಪ ಬಂದಿದ್ದರಿಂದ ಶೇಕಡ 50-60 ಭಾಗ ಆಗಿದ್ದರೂ ಮಫ್ ಮತ್ತು ಉತ್ತರೆ ದೊಡ್ಡಮಳೆಗಳು ಬಾರದೇ ಇರುವುದರಿಂದ ಹಿಂಗಾರು ಬೆಳೆ ರಾಗಿ ಬೆಳೆಯೂ ಸಹ ಪೂರ್ಣವಾಗಿ ಒಣಗಿಹೋಗಿರುತ್ತದೆ. ಆದ್ದರಿಂದ ಕಡೂರು ತಾಲ್ಲೂಕನ್ನು ಬರಗಾಲವೆಂದು ಘೋಷಿಸಬೇಕೆಂದು ಸರ್ಕಾರದ ಗಮನಕ್ಕೆ ತರುತ್ತೇನೆ.
2. ಕಡೂರು ತಾಲ್ಲೂಕಿನ ಎಲ್ಲಾ ಕೆರೆಕಟ್ಟೆಗಳು ಒಣಗಿಹೋಗಿದ್ದು ಅಂತರ ಜಲದ ಮಟ್ಟ ಕಡಿಮೆಯಾಗಿದ್ದು ಕುಡಿಯುವ ನೀರಿನ ತೊಂದರೆಯಾಗಿರುವುದರಿಂದ ಸರ್ಕಾರ ಆದಷ್ಟು ತೀವ್ರವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.
3. ಜಿಲ್ಲೆಯ ಜಾನುವಾರುಗಳ ಸಂಖ್ಯೆಯಲ್ಲಿ ಕಡೂರು ತಾಲ್ಲೂಕಿನ ಜಾನುವಾರುಗಳ ಸಂಖ್ಯೆ ಶೇಕಡ 60 ಭಾಗವಿರುತ್ತದೆ. ಅವುಗಳಿಗೆ ಜಾನುವಾರುಗಳ ಮೇವಿಗೆ (ಹುಲ್ಲು) ತೊಂದರೆಯಾಗಿರುವುದರಿಂದ ತೀವ್ರವಾದ ಕ್ರಮ ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.
4. ಕಡೂರು ತಾಲ್ಲೂಕಿನಲ್ಲಿ 1000-00 ಎಕರೆ ಅಮೃತಮಹಲ್ ಕಾವಲಿದ್ದು 1986-97ರ ಸಾಲಿನಲ್ಲಿ ಬರಗಾಲ ಬಂದ ಸಂದರ್ಭದಲ್ಲಿ ಪ್ರತಿ ದಿನ 25 ಟನ್ ಹಸಿರು ಮೇವನ್ನು ಬೆಳೆಯುತ್ತಿದ್ದು ಈಗಲೂ ಏಕೆ ಬೆಳೆಸಬಾರದೆಂದು ಸರ್ಕಾರದ ಗಮನಕ್ಕೆ ತರಬಯ ಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಕಂದಾಯ ಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ದಿನಾಂಕ 16.9.1995ರವರೆಗಿನ ಮಳೆ ಮತ್ತು ಬೆಳೆ ಪರಿಸ್ಥಿತಿ ವರದಿಯ ಪ್ರಕಾರ ರಾಜ್ಯದ 175 ತಾಲ್ಲೂಕುಗಳ ಪೈಕಿ 136 ತಾಲ್ಲೂಕುಗಳಲ್ಲಿ ಅಧಿಕ ಮತ್ತು ಮಾಮೂಲು ಮಳೆಯಾಗಿದ್ದು, ಕೇವಲ 39 ತಾಲ್ಲೂಕುಗಳಿಲ್ಲ ಮಾತ್ರ ಮಳೆಯ ಕೊರತೆಯುಂಟಾಗಿರುತ್ತದೆ. ಆದಾಗ್ಯೂ ತೀವ್ರ ಕೊರತೆ ಇರುವ ತಾಲ್ಲೂಕುಗಳು ಯಾವುವೂ ಇರುವುದಿಲ್ಲ. ಹಿಂದಿನ ವರ್ಷ ಇದೇ ಅವಧಿಯಲ್ಲಿ ರಾಜ್ಯದ 85 ತಾಲ್ಲೂಕುಗಳಲ್ಲಿ ಮಳೆ ಕೊರತೆಯುಂಟಾಗಿತ್ತು.